## ಸಮಾಚಾರ ಸಣ್ಣದಲ್ಲ

# ಆರೋಗ್ಯ ಪರೀಕ್ಷೆ ನಿರ್ಲಕ್ಷ್ಯ ಬೇಡ

**ಬೆಂಗಳೂರು:** ದಿಢೀರ್ ಹೃದಯ ಸ್ತಂಭನಗಳು ಮತ್ತು ಹೃದಯಾಘಾತಗಳು ಬಹಳ ಕ್ರಿಯಾಶೀಲ ಮತ್ತು ಆರೋಗ್ಯಕರವಾಗಿ ಕಾಣುವ 30ರಿಂದ 40ರ ವಯಸ್ಸಿನವರಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಇದರಿಂದ ಹೃದಯರೋಗಗಳ ಹೆಚ್ಚಿನ ರಿಸ್ಕ್ ಹೊಂದಿರುವ ಭಾರತೀಯರಲ್ಲಿ 35-40ರ ವಯಸ್ಸಿನ ನಂತರ ರೋಗ ತಡೆಯ ಆರೋಗ್ಯ ಪರೀಕ್ಷೆಗಳು ಬಹಳ ಮುಖ್ಯ ಎಂದು ಅಪೋಲೋ ಆಸ್ಪತ್ರೆ ಹೃದ್ರೋಗ ತಜ್ಞ ಡಾ.ವಿಠಲ್‌ಭಾಗಿ ತಿಳಿಸಿದ್ದಾರೆ. ರಕ್ತದೊತ್ತಡ, ಕೊಲೆಸ್ಟ್ರಾಲ್, ರಕ್ತದಸಕ್ಕರೆ ನಿಯಮಿತಪರೀಕ್ಷಿಸುವುದು, ಇಸಿಜಿ, ಎಕೊ ಕಾರ್ಡಿಯೊಗ್ರಫಿ ಮತ್ತು ಒತ್ತಡದ ಪರೀಕ್ಷೆಗಳು ಗೌಪ್ಯವಾಗಿರುವ ರಿಸ್ಕ್‌ಗಳನ್ನುಮೊದಲೇ ಕಂಡುಕೊಳ್ಳಲು ನೆರವಾಗುತ್ತವೆ. ಹಲವಾರು ಜನರಿಗೆ ತುರ್ತು ಪರಿಸ್ಥಿತಿ ಒದಗುವ ವರೆಗೂ ಅಧಿಕ ರಕ್ತದೊತ್ತಡ, ಮಧುಮೇಹ, ಹೆಚ್ಚಿನ ಕೊಲೆಸ್ಟ್ರಾಲ್ ಅಥವಾ ಹೃದಯ ಕವಾಟಗಳಲ್ಲಿ ತಡೆಯ ಸಮಸ್ಯೆಗಳಿಂದ ಬಳಲುತ್ತಿರುವುದು ತಿಳಿದೇ ಇರುವುದಿಲ್ಲ. ಒತ್ತಡ, ಬೊಜ್ಜು, ಧೂಮಪಾನ, ವ್ಯಾಯಾಮದ ಕೊರತೆ, ಅಸಮರ್ಪಕ ನಿದ್ರೆ ಮತ್ತುಕೌಟುಂಬಿಕ ಇತಿಹಾಸವು ಇದಕ್ಕೆ ಪ್ರಮುಖ ಕೊಡುಗೆ ನೀಡುತ್ತದೆ. ಪ್ರಾರಂಭಿಕಪತ್ತೆ, ಜೀವನಶೈಲಿ ಬದಲಾವಣೆಗಳು ಮತ್ತು ಸಕಾಲಿಕ ವೈದ್ಯಕೀಯ ಆರೈಕೆಯು ಬಹಳಷ್ಟು ಅಂತಹ ದುರಂತಗಳನ್ನು ತಪ್ಪಿಸಬಲ್ಲದು ಎಂದು ತಿಳಿಸಿದ್ದಾರೆ.

# ಹಿಜಾಬ್‌ಗೆ ಅನುಮತಿ ನೀಡಿದ್ದು ಖಂಡನೀಯ

**ಬೆಂಗಳೂರು:** ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧವನ್ನು ತೆಗೆದುಹಾಕಲು ರಾಜ್ಯ ಸರಕಾರಕ್ಕೆ ತೆಗೆದುಕೊಂಡ ನಿರ್ಧಾರಕ್ಕೆ ಹಿಂದೂ ಪರಿಷತ್ ಆಕ್ಷೇಪಣೆ ವ್ಯಕ್ತಪಡಿಸಿದೆ. ಕರ್ನಾಟಕದ ಕಾಂಗ್ರೆಸ್ ಸರಕಾರದ ತುಷ್ಟಿಕರಣ ರಾಜಕಾರಣ ಶಿಕ್ಷಣದ ಅಂಗಳಕ್ಕೂ ಕಾಲಿಟ್ಟಿರುವುದು ಅತ್ಯಂತ ದುರದೃಷ್ಟಕರ. ಹಿಜಾಬ್ ವಿವಾದಕ್ಕೆ ಸಂಬಂಧಿಸಿದ ಅರ್ಜಿಗಳು ಇನ್ನೂ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠದ ಮುಂದೆ ಬಾಕಿ ಇರುವಾಗಲೇ, ನ್ಯಾಯಾಂಗದ ಪ್ರಕ್ರಿಯೆಯನ್ನು ಕಡೆಗಣಿಸಿ ಹಿಜಾಬ್ ನಿಷೇಧವನ್ನು ಸರಕಾರ ಹಿಂಪಡೆದಿರುವುದು ನ್ಯಾಯಾಂಗ ವ್ಯವಸ್ಥೆಗೆ ಮಾಡುವ ಅಪಮಾನ. ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರ ಸಂಹಿತೆಯ ಮೂಲ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ಸಮಾನತೆ ಬೆಳೆಸುವುದು. ಆದರೆ ಕಾಂಗ್ರೆಸ್ ಸರಕಾರವೇ ಈ ರೀತಿ ಧರ್ಮದ ಆಧಾರದ ಮೇಲೆ ತಾರತಮ್ಯ ಎಸಗುತ್ತಿರುವುದು ಖಂಡನೀಯ. ದೇಶದೆಲ್ಲೆಡೆ ಏಕರೂಪ ನಾಗರಿಕ ಸಂಹಿತೆ ಜಾರಿ ತರುತ್ತಿರುವ ಈ ಬೆನ್ನಲ್ಲೆ ಕರ್ನಾಟಕದ ಕಾಂಗ್ರೆಸ್ ಸರಕಾರ ಧರ್ಮಗಳನ್ನು ಒಡೆದು ಆಳುವ ನೀತಿಗೆ ಕೈಹಾಕಿದೆ. ಕೇಸರಿ ಶಾಲು ಧಾರ್ಮಿಕವಲ್ಲ, ಯಾವ ಬಣ್ಣಗಳ ಹಾಕಬೇಕು, ಹಾಕಬಾರದು ಎಂದು ಹಕ್ಕನ್ನು ಕಸಿದುಕೊಳ್ಳುವ ಸರ್ವಾಧಿಕಾರದ ಧೋರಣೆಯನ್ನು ರಾಜ್ಯ ಕಾಂಗ್ರೆಸ್ ಸರಕಾರ ಪ್ರದರ್ಶಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ವಿರಾಮ
ಪ್ರತಿ ಭಾನುವಾರ

## ಪ್ರತ್ಯೇಕ ಡ್ರೋನ್ ಹಾರಾಟ ಪರೀಕ್ಷಾ ಸೌಲಭ್ಯ ಅಭಿವೃದ್ಧಿಗೆ ನಿರ್ಧಾರ

# ಡ್ರೋನ್‌ಗಳ ವ್ಯಾಪಕ ಬಳಕೆಗೆ ಉತ್ತೇಜನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡ್ರೋನ್‌ಗಳು ಆಡಳಿತದ ದಕ್ಷತೆ ಮತ್ತು ಸಾರ್ವಜನಿಕ ಸೇವೆಗಳ ಸ್ವರೂಪ ಗಮನಾರ್ಹವಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿದ್ದು, ಅವುಗಳ ವ್ಯಾಪಕ ಬಳಕೆಗೆ ರಾಜ್ಯ ಸರಕಾರ ಅಗತ್ಯ ಉತ್ತೇಜನ ನೀಡಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶುಕ್ರವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಡ್ರೋನ್ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿ, ಡ್ರೋನ್‌ಗಳ ತಯಾರಿಕೆ ಮತ್ತು ಬಳಕೆಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ, ಸರಕಾರದ ಅಗತ್ಯ ಬೆಂಬಲ ಮತ್ತು ಅಗತ್ಯ ಇರುವ ಕಡೆಗಳಲ್ಲಿ ಡ್ರೋನ್ ಬಳಕೆ ಹೆಚ್ಚಿಸುವ ಮೂಲಕ ದೇಶದ ಡ್ರೋನ್ ಆರ್ಥಿಕತೆಯನ್ನು ಮುನ್ನಡೆಸಲು ಕರ್ನಾಟಕ ಬದ್ಧವಾಗಿದೆ ಎಂದರು. ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಇಲಾಖೆಯು , ಭಾರತದ ಡ್ರೋನ್ ಒಕ್ಕೂಟದ ಸಹಯೋಗದಲ್ಲಿ ಈ ಸಭೆ ಆಯೋಜಿಸಿತ್ತು.ಡ್ರೋನ್ ನಾವೀನ್ಯತೆ ಮತ್ತು ಅವುಗಳ ಬಳಕೆಯಲ್ಲಿ ಕರ್ನಾಟಕವು ಮುಂಚೂಣಿ ಯಲ್ಲಿ ಇರುವುದಕ್ಕೆ ಇನ್ನಷ್ಟು ವೇಗ ನೀಡಲು ಕೈಗೊಳ್ಳಬೇಕಾದ ಕ್ರಮ ಗಳನ್ನು ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು. ಎಲೆಕ್ಟ್ರಾನಿಕ್ಸ್ ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ. ಎನ್. ಮಂಜುಳಾ, ಇಲಾಖೆಯ ನಿರ್ದೇಶಕ ಮತ್ತು ಕೆಐಟಿಎಸ್ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ, ಕೆಡಿಇಎಂ ಸಿಇಒ ಸಂಜೀವ್ ಕುಮಾರ್ ಗುಪ್ತಾ, ಭಾರತದ ಡ್ರೋನ್ ಒಕ್ಕೂಟದ (ಡಿಜಿಐ) ಅಧ್ಯಕ್ಷ ಸ್ಮಿತ್ ಶಾ ಸಭೆಯಲ್ಲಿ ಉಪಸ್ಥಿತರಿದ್ದರು.



ಸಚಿವ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ಡ್ರೋನ್ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿ ಉನ್ನತ ಮಟ್ಟದ ಸಭೆ ನಡೆಯಿತು.

> **ಡ್ರೋನ್‌ಗಳ ಪರೀಕ್ಷಾ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು, ನಿಯಂತ್ರಣ ಕ್ರಮಗಳನ್ನು ಸರಳೀಕರಣಗೊಳಿಸುವುದು, ಈ ವಲಯದ ನವೋದ್ಯಮಗಳು ಮತ್ತು ಡ್ರೋನ್ ಉದ್ಯಮವು ನಾವೀನ್ಯತೆ ಸಾಧಿಸಲು ಮತ್ತು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ರಾಜ್ಯ ಸರಕಾರ ಗಮನ ನೀಡುತ್ತಿದೆ.**
>
> **- ಪ್ರಿಯಾಂಕ್ ಖರ್ಗೆ ಸಚಿವ**

# ಚಿತ್ರಕಲಾ ಪರಿಷತ್‌ನಲ್ಲಿ ವಸ್ತು ಪ್ರದರ್ಶನ ಆರಂಭ

**ಬೆಂಗಳೂರು:** ಭಾರತೀಯ ಸಂಪ್ರದಾಯಿಕ ಮತ್ತು ಆಧುನಿಕ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಚಿತ್ರಕಲಾ ಪರಿಷತ್‌ನಲ್ಲಿ ಶುಕ್ರವಾರದಿಂದ ಆರಂಭವಾಗಿದೆ.

ಗ್ರಾಂಡ್ ಫಿಲಾ ಮಾರ್ಕೆಟ್ ಮತ್ತು ಇಂಡಿಯನ್ ಆರ್ಟಿಸನ್ಸ್ ಬಜಾರ್ ಸಹಯೋಗದಲ್ಲಿ ಆಯೋಜಿಸಿರುವ ಮೀನಾ ಬಜಾರ್ ಈ ವಸ್ತು ಪ್ರದರ್ಶನದಲ್ಲಿ ಒಂದೇ ಸೂರಿನಡಿ ಗೃಹ ಅಲಂಕಾರ ವಸ್ತುಗಳು, ವಿವಿಧ ರಾಜ್ಯಗಳ ಸಾಂಪ್ರದಾಯಿಕ ಶೈಲಿಯ ಉಡುಗೆ - ತೊಡುಗೆಗಳು ದೊರೆಯಲಿವೆ. ಈ ಪ್ರದರ್ಶನಕ್ಕೆ ಕಂಟೆಂಟ್ ಕ್ರಿಯೇಟರ್ ಮೋನಿಕಾ ಅಗ್ನಿಹೋತ್ರಿ ಚಾಲನೆ ನೀಡಿದರು. ಗೃಹ ಅಲಂಕಾರಕ್ಕೆ ಬೇಕಾದಂತಹ ವಿವಿಧ ಬಗೆಯ ವಿದ್ಯುತ್ ದೀಪ, ಕರ್ಟನ್, ಪೀಠೋಪಕರಣ, ಪುರಾತನ ವಿಗ್ರಹಗಳು, ದೇವರ ಮೂರ್ತಿಗಳು ಹೀಗೆ ಹತ್ತು ಹಲವು ವಸ್ತುಗಳು ಸಿಕ್ಕರೆ, ಇನ್ನೂ ಮನಮುಟ್ಟುವ ರಾಜಸ್ಥಾನಿ ಶೈಲಿಯ ಉಡುಗೆಗಳು, ಕಿವಿಯೋಲೆ, ಕರಕುಶಲ ವಸ್ತುಗಳು ಜನರ ಮನ ಸೆಳೆಯಲಿವೆ.ಈ ಪ್ರದರ್ಶನವು ಮೇ 31ರವರೆಗೆ ನಡೆಯಲಿದೆ. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮೋನಿಕಾ ಅಗ್ನಿಹೋತ್ರಿ, ರಾಜ್ಯದಲ್ಲಿ ಹೆಚ್ಚು ಜನಪ್ರಿಯವಾಗಿರುವ ವಸ್ತುಗಳನ್ನು ಖರೀದಿಸಿ ತಮ್ಮ ಮನೆಯನ್ನು ಮತ್ತಷ್ಟು ಅಲಂಕಾರಿಕವಾಗಿಸುವ ಕನಸು ಎಲ್ಲರಲ್ಲೂ ಇರುತ್ತದೆ. ಇದಕ್ಕಾಗಿ ನೀವು ರಾಜ್ಯದ ವಿವಿಧ ಮೂಲಗಳಿಗೆ ಹೋಗುವ ಅವಶ್ಯಕತೆ ಇಲ್ಲ. ಏಕೆಂದರೆ, ಎಲ್ಲವೂ ಇಲ್ಲೇ ಸಿಗಲಿದೆ. ಇದಕ್ಕಾಗಿಯೇ ಬೆಂಗಳೂರು ಉತ್ಸವ ಆಯೋಜಿಸಲಾಗಿದೆ. ಕುಶಲ ಕರ್ಮಿಗಳಿಂದ ನೇರವಾಗಿ ಗ್ರಾಹಕರನ್ನು ತಲುಪುವುದರಿಂದ ವಸ್ತುಗಳ ಬೆಲೆಯೂ ಕಡಿಮೆ ಇದೆ. ಬಳೆಗಳು, ಫ್ಯಾನ್ಸಿ ಆಭರಣಗಳು, ಪಾದರಕ್ಷೆ, ದಿನ ಬಳಕೆ ವಸ್ತುಗಳು, ಸಿಹಿತಿನಿಸುಗಳು, ಮಕ್ಕಳ ಆಟಿಕೆಗಳು, ಸುಗಂಧ ದ್ರವ್ಯಗಳು ಸೇರಿದಂತೆ ನೂರಾರು ಉತ್ಪನ್ನಗಳು ಈ ಪ್ರದರ್ಶನದಲ್ಲಿ ದೊರೆಯುತ್ತಿವೆ ಎಂದರು.

# ನಾಳೆ ಎರಡು ಗಂಟೆ ನೇರಳೆ ಮಾರ್ಗ ಸ್ಥಗಿತ

**ಬೆಂಗಳೂರು:** ನಮ್ಮ ಮೆಟ್ರೋ ನೇರಳೆ ಮಾರ್ಗದಲ್ಲಿ ಪ್ರಯಾಣಿಸುವ ಸಾರ್ವಜನಿಕರಿಗೆ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಪ್ರಮುಖ ಪ್ರಕಟಣೆಯೊಂದನ್ನು ಹೊರಡಿಸಿದೆ. ಅಗತ್ಯ ನಿರ್ವಹಣಾ ಕಾಮಗಾರಿಗಳ ಹಿನ್ನೆಲೆ ಮೇ 17ರಂದು ನೇರಳೆ ಮಾರ್ಗದ ಕೆಲವು ನಿಲ್ದಾಣಗಳ ನಡುವೆ ಬೆಳಗ್ಗೆ 2 ಗಂಟೆಗಳ ಕಾಲ ಮೆಟ್ರೋ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ.

ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣಗಳ ನಡುವೆ ಅತ್ಯಗತ್ಯ ನಿರ್ವಹಣಾ ಕಾಮಗಾರಿ ನಡೆಯಲಿದೆ. ಈ ಕಾರಣದಿಂದಾಗಿ, ಭಾನುವಾರ ಬೆಳಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿ ನಿಲ್ದಾಣ (ಹೊಸಹಳ್ಳಿ) ಮತ್ತು ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣಗಳ ನಡುವೆ ರೈಲು ಸಂಚಾರ ಇರುವುದಿಲ್ಲ. ಸಾರ್ವಜನಿಕರ ಅನುಕೂಲಕ್ಕಾಗಿ ಬೆಳಗ್ಗೆ 07 ಗಂಟೆಯಿಂದ 09 ಗಂಟೆ ಅವಧಿಯಲ್ಲಿ ಕೆಳಕಂಡ ಮಾರ್ಗಗಳಲ್ಲಿ ಎಂದಿನಂತೆ ಮೆಟ್ರೋ ರೈಲುಗಳು ನಿಯಮಿತ ವೇಳಾಪಟ್ಟಿಯಂತೆ ಸಂಚರಿಸಲಿವೆ. ಚಲ್ಲಘಟ್ಟ - ವಿಜಯನಗರ, ಎಂ.ಜಿ. ರಸ್ತೆ - ವೈಟ್ ಫೀಲ್ಡ್, ಕಾಡುಗೋಡಿ, ಮಾದಾವರ - ಸಿಲ್ಕ್ ಇನ್‌ಸ್ಟಿಟ್ಯೂಟ್, ಆರ್.ವಿ. ರಸ್ತೆ - ಬೊಮ್ಮಸಂದ್ರ ನಡುವೆ ಎಂದಿನಂತೆ ಕಾರ್ಯನಿರ್ವಹಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

# ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನಕ್ಕೆ ಇಂದಿನಿಂದ ಚಾಲನೆ

**ಬೆಂಗಳೂರು:** ಜಿಬಿಎ ವತಿಯಿಂದ ನಗರ ಭೂಮಾಲೀಕರಿಗೆ ಮಹತ್ವದ ಸೌಲಭ್ಯ ಒದಗಿಸುವ ಉದ್ದೇಶದಿಂದ ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನಕ್ಕೆ ಮೇ 16ರಿಂದ ಅಧಿಕೃತ ಚಾಲನೆ ದೊರೆಯಲಿದೆ. ರಾಜ್ಯ ಸರಕಾರದ ಭೂ ಗ್ಯಾರಂಟಿ ಯೋಜನೆಯ ಅಂಗವಾಗಿ ಆರಂಭವಾಗುತ್ತಿರುವ ಈ ಅಭಿಯಾನಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಲಿದ್ದಾರೆ.

ಬೆಂಗಳೂರು ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿನ 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಹಾಗೂ ಡಿಜಿಟಲೀಕರಣಗೊಳಿಸಿ ಇ-ಖಾತೆ ಸಿದ್ಧಪಡಿಸಲಾಗಿದ್ದು, ನಾಗರಿಕರಿಗೆ ಹಂತ ಹಂತವಾಗಿ ವಿತರಣೆ ನಡೆಯುತ್ತಿದೆ. ವಿಶೇಷವಾಗಿ ಬಿ ಖಾತಾದಿಂದ ಎ ಖಾತಾಕ್ಕೆ ಪರಿವರ್ತನೆಗೆ ಮಾರ್ಗಸೂಚಿ ಬೆಲೆಯ ಶೇ.5 ಬದಲಿಗೆ ಕೇವಲ ಶೇ.2 ಪಾವತಿಸುವ ಅವಕಾಶ ನೀಡಲಾಗಿದೆ. ಈ ಸೌಲಭ್ಯ 100 ದಿನಗಳವರೆಗೆ ಮಾತ್ರ ಲಭ್ಯವಿರಲಿದೆ. ನಗರದಾದ್ಯಂತ 52 ಕೇಂದ್ರಗಳಲ್ಲಿ ಪ್ರತಿ ಶನಿವಾರ ಅಭಿಯಾನ ನಡೆಯಲಿದ್ದು, ಒಂದು ಕೇಂದ್ರದಲ್ಲಿ 100 ರಿಂದ 200 ಜನರಿಗೆ ಸೇವೆ ನೀಡುವ ಗುರಿ ಹೊಂದಲಾಗಿದೆ. ಹೆಚ್ಚುವರಿ ಜನರು ಆಗಮಿಸಿದಲ್ಲಿ ಟೋಕನ್ ನೀಡಿ ಮುಂದಿನ ವಾರ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಒಟ್ಟಾರೆ ಪ್ರತಿ ಶನಿವಾರ ಸುಮಾರು 5 ಸಾವಿರ ನಾಗರಿಕರಿಗೆ ಸೇವೆ ಒದಗಿಸುವ ಯೋಜನೆ ರೂಪಿಸಲಾಗಿದೆ.

ಜಿಬಿಎ ವ್ಯಾಪ್ತಿಯ ಪೂರ್ವ, ಕೇಂದ್ರ, ಪಶ್ಚಿಮ, ದಕ್ಷಿಣ ಹಾಗೂ ಉತ್ತರ ನಗರ ಪಾಲಿಕೆಗಳ ವಿವಿಧ ಪ್ರದೇಶಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಮಾರತಹಳ್ಳಿ, ವೈಟ್‌ಫೀಲ್ಡ್, ಹೆಬ್ಬಾಳ, ಯಲಹಂಕ, ಬಸವನಗುಡಿ, ಮಲ್ಲೇಶ್ವರಂ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್ ಸೇರಿ ಪ್ರಮುಖ ಪ್ರದೇಶಗಳನ್ನು ಒಳಗೊಂಡಿದೆ. ಸಹಾಯಕ ಕಂದಾಯಾಧಿಕಾರಿಗಳು, ಕಂದಾಯ ನಿರೀಕ್ಷಕರು, ತಾಂತ್ರಿಕ ತಂಡಗಳು ಹಾಗೂ ನಾಗರಿಕ ಸೌಲಭ್ಯ ಸಿಬ್ಬಂದಿ ಸ್ಥಳದಲ್ಲೇ ಹಾಜರಿದ್ದು, ಅರ್ಜಿಗಳ ತ್ವರಿತ ವಿಲೇವಾರಿ ಹಾಗೂ ಸಮಸ್ಯೆ ಪರಿಹಾರ ಕೈಗೊಳ್ಳಲಿದ್ದಾರೆ ಎಂದು ಜಿಬಿಎ ತಿಳಿಸಿದೆ.

## ನಕಲಿ ದಾಖಲೆ ಸಲ್ಲಿಸಿ ನೌಕರಿ ಗಿಟ್ಟಿಸಿಕೊಂಡಿದ್ದವನಿಗೆ ಕಾನೂನಿನ ಕುಣಿಕೆ

# ನಾಲ್ಕು ದಶಕದ ಬಳಿಕ ಸಿಕ್ಕ ಅಂಕಪಟ್ಟಿ!

**ಬೆಂಗಳೂರು:** ಸಣ್ಣ ನಿರ್ಲಕ್ಷ್ಯವೊಂದು ಒಬ್ಬರ ಬದುಕು ಬದಲಿಸಿದರೆ, ಇನ್ನೊಬ್ಬರಿಗೆ 40 ವರ್ಷಗಳ ಕಾಲ ಸರಕಾರಿ ನೌಕರಿ ತಂದುಕೊಟ್ಟ ಪ್ರಕರಣ ಬೆಂಗಳೂರಿನಲ್ಲಿ ಬಯಲಾಗಿದೆ.

ನಕಲಿ ದಾಖಲೆ ಕೊಟ್ಟು ಸರಕಾರಿ ಕೆಲಸ ಪಡೆದ ಬೊಮ್ಮೇಗೌಡ ಹಾಗೂ ಅದಕ್ಕೆ ಸಾಥ್ ನೀಡಿದ ಆರೋಪದಡಿ ರಾಚಯ್ಯ ಎಂಬವರ ಕೊರಳಿಗೆ ಇದೀಗ ಕಾನೂನಿನ ಕುಣಿಕೆ ಬಿಗಿದಿದೆ. ಬೆಸ್ಕಾಂ ಅಧಿಕಾರಿಗಳು ನೀಡಿದ ದೂರಿನನ್ವಯ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿಯ ಎಂ.ರಾಚಯ್ಯ 1982ರಲ್ಲಿ ಶಿವಮೊಗ್ಗದ ಕರ್ನಾಟಕ ವಿದ್ಯುತ್ ಮಂಡಳಿ ಕಚೇರಿಗೆ ಲೈನ್‌ಮ್ಯಾನ್ ಹುದ್ದೆಯ ಸಂದರ್ಶನಕ್ಕೆ ಹೋಗಿದ್ದರು. ಆದರೆ ಅಂದು ಕಾರಣಾಂತರಗಳಿಂದ ಸಂದರ್ಶನ ರದ್ದಾಗಿತ್ತು. ನಿರಾಶರಾಗಿ ವಾಪಸ್ ಬರುವಾಗ ತಮ್ಮ 7ನೇ ತರಗತಿಯ ಅಂಕಪಟ್ಟಿಯನ್ನು ಕಚೇರಿಯಲ್ಲೇ ಮರೆತು ಬಂದಿದ್ದರು. ಅದೇ ಸಮಯದಲ್ಲಿ ಕೆಲಸ ಹುಡುಕಿಕೊಂಡು ಬಂದಿದ್ದ ನಾಗಮಂಗಲದ ಬೊಮ್ಮೇಗೌಡ ಎಂಬುವರಿಗೆ ಆ ಅಂಕಪಟ್ಟಿ ಸಿಕ್ಕಿದೆ. ಕೂಡಲೇ ಕಾರ್ಯಪ್ರವೃತ್ತರಾದ ಬೊಮ್ಮೇಗೌಡ, ರಾಚಯ್ಯರ ಹೆಸರನ್ನೇ ಬಳಸಿಕೊಂಡು ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದರು. 1992ರಲ್ಲಿ ಕೆಲಸವೂ ಕಾಯಂ ಆಗಿತ್ತು. ಅಚ್ಚರಿ ಎಂದರೆ, 2003ರಲ್ಲಿ ಬೊಮ್ಮೇಗೌಡ ಕೋರ್ಟ್ ಮೂಲಕ ಅಫಿಡವಿಟ್ ಸಲ್ಲಿಸಿ, ನನ್ನ ಹೆಸರು ರಾಚಯ್ಯ ಅಲ್ಲ, ಬೊಮ್ಮೇಗೌಡ ಎಂದು ಬದಲಿಸಿಕೊಂಡು ಇಲಾಖೆಯ ಎಲ್ಲಾ ದಾಖಲೆಗಳಲ್ಲೂ ಸರಿಪಡಿಸಿಕೊಂಡಿದ್ದರು.


**2019ರಲ್ಲಿ ಸತ್ಯ ಬಯಲು:** 37 ವರ್ಷಗಳ ನಂತರ ಅಸಲಿ ರಾಚಯ್ಯ ಅವರಿಗೆ ಈ ವಿಷಯ ತಿಳಿದಿದೆ. ಪೊಲೀಸರಿಗೆ ದೂರು ನೀಡುವ ಬದಲು, ಇಬ್ಬರೂ ಮಳವಳ್ಳಿಯಲ್ಲಿ ಹಿರಿಯರ ಮುಂದೆ ರಾಜಿ ಪಂಚಾಯಿತಿ ನಡೆಸಿದ್ದರು. ಬೊಮ್ಮೇಗೌಡ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅಸಲಿ ರಾಚಯ್ಯ ಅವರಿಗೆ ಪ್ರತಿ ವರ್ಷ 2ರಿಂದ 3 ಲಕ್ಷ ರು. ನೀಡುವುದಾಗಿ ಒಪ್ಪಂದ ಮಾಡಿಕೊಂಡಿದ್ದರು. 2022ರಲ್ಲಿ ಬೊಮ್ಮೇಗೌಡ ನಿವೃತ್ತರಾದಾಗ ಬಂದ 10 ಲಕ್ಷ ರು. ಗ್ರಾಚ್ಯುಟಿ ಹಣವನ್ನು ಪೂರ್ಣವಾಗಿ ಅಸಲಿ ರಾಚಯ್ಯಗೆ ನೀಡಿದ್ದರು.

ಎಲ್ಲವೂ ಸುಗಮವಾಗಿ ಸಾಗುತ್ತಿತ್ತು. ಆದರೆ ನಂತರ ಬೊಮ್ಮೇಗೌಡರಿಗೆ ಬರುತ್ತಿದ್ದ 65,224 ರು. ಮಾಸಿಕ ಪಿಂಚಣಿ ಹಣದಲ್ಲಿ ಅರ್ಧ ಪಾಲು ಬೇಕೆಂದು ಅಸಲಿ ರಾಚಯ್ಯ ಪಟ್ಟು ಹಿಡಿದಿದ್ದರು. ಇದಕ್ಕೆ ಬೊಮ್ಮೇಗೌಡ ಒಪ್ಪದೇ ಇದ್ದಾಗ ಹತಾಶರಾದ ರಾಚಯ್ಯ ನೇರವಾಗಿ ಬೆಸ್ಕಾಂ ವಿಜಿಲೆನ್ಸ್ ವಿಭಾಗಕ್ಕೆ ದೂರು ನೀಡಿದ್ದರು.

ಬೆಸ್ಕಾಂ ಅಧಿಕಾರಿಗಳು ಆಂತರಿಕ ತನಿಖೆ ನಡೆಸಿದಾಗ ದಶಕಗಳ ಕಾಲ ವಂಚನೆಯಾಗಿರುವುದು ಬಯಲಾಗಿದೆ. ಸದ್ಯ ಬೆಸ್ಕಾಂ ಅಧಿಕಾರಿಗಳ ದೂರಿನ ಮೇರೆಗೆ ರಾಜಾಜಿ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬೊಮ್ಮೇಗೌಡ (ನಕಲಿ ರಾಚಯ್ಯ) ವಿರುದ್ಧ ವಂಚನೆ ಮತ್ತು ಗುರುತು ಕಳ್ಳತನದ ಆರೋಪ ಹಾಗೂ ಅಸಲಿ ರಾಚಯ್ಯ ವಿರುದ್ಧ ಅಪರಾಧ ತಿಳಿದಿದ್ದರೂ ಹಣಕ್ಕಾಗಿ ಮುಚ್ಚಿಟ್ಟ ಆರೋಪ, ಸುಭಾಷ್ (ನಿವೃತ್ತ ಎಂಜಿನಿಯರ್) ಇಬ್ಬರ ನಡುವೆ ಸಂಧಾನಕ್ಕೆ ಸಾಕ್ಷಿಯಾಗಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

# ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಸಾಗಿಸುತ್ತಿದ್ದ 47 ವನ್ಯಜೀವಿಗಳ ವಶ

**ಬೆಂಗಳೂರು:** ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಸಾಗಿಸುತ್ತಿದ್ದ ವನ್ಯಜೀವಿಗಳನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.



ಬ್ಯಾಂಕಾಕ್‌ನಿಂದ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ಕೆಂಪು ಪಾದದ ಆಮೆಗಳು, ಆಫ್ರಿಕನ್ ಆಮೆಗಳು, ಅರ್ಜೆಂಟಿನಾ ಕಪ್ಪು-ಬಿಳಿ ತೇಗು, ಗೋಲ್ಡೀಸ್ ಮಾರ್ಮೊಸೆಟ್ ಸೇರಿದಂತೆ 47 ವನ್ಯ ಜೀವಿಗಳನ್ನ ವಶಕ್ಕೆ ಪಡೆದುಕೊಂಡಿದ್ದಾರೆ. ಕಸ್ಟಮ್ಸ್ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದು ಆರೋಪಿಯನ್ನ ವನ್ಯಜೀವಿ ಸಂರಕ್ಷಣಾ ಕಾಯಿದೆಯಡಿ ಮುಂದಿನ ಕಾನೂನು ಕ್ರಮಕ್ಕಾಗಿ ಬೆಂಗಳೂರು ಗ್ರಾಮಾಂತರ ಆರ್ ಎಫ್‌ಒ ವಶಕ್ಕೆ ನೀಡಲಾಗಿದೆ.

**3 ಕೋಟಿ ಮೌಲ್ಯದ ಗಾಂಜಾ ಜಪ್ತಿ:** ಮತ್ತೊಂದು ಪ್ರಕರಣದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಬರೋಬ್ಬರಿ 3 ಕೋಟಿ 26 ಲಕ್ಷ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆದು ಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬಂದ ಪ್ರಯಾಣಿಕರ ತಪಾಸಣೆ ವೇಳೆ ಲಗೇಜ್ ನಲ್ಲಿ ಗಾಂಜಾ ಪತ್ತೆಯಾಗಿದೆ. ಓರ್ವ ಪ್ರಯಾಣಿಕನ ಬಳಿ ಎಂಟೂವರೆ ಕೆಜಿಯ ಬರೋಬ್ಬರಿ 2.98 ಕೋಟಿ ಮೌಲ್ಯದ ಗಾಂಜಾ ಹಾಗೂ ಮತ್ತೊರ್ವ ಪ್ರಯಾಣಿಕನ ಬಳಿ 28 ಲಕ್ಷ ಮೌಲ್ಯದ 800 ಗ್ರಾಂ ಗಾಂಜಾ ಪತ್ತೆಯಾಗಿದೆ.

SBI

**ಭಾರತೀಯ ಸ್ಟೇಟ್ ಬ್ಯಾಂಕ್**
**ಕಲ್ಯಾಣ್‌ನಗರ ಶಾಖೆ (17735)**
5ನೇ ಮುಖ್ಯ ರಸ್ತೆ HRBR ಲೇಔಟ್ 2ನೇ ಹಂತ, ಕಲ್ಯಾಣ್‌ನಗರ, ಬೆಂಗಳೂರು-560043.

**ಇ-ಹರಾಜು ಮೂಲಕ ವಾಹನಗಳ ಮಾರಾಟಕ್ಕೆ ಸೂಚನೆ**

ಈ ಕೆಳಕಂಡ ವಾಹನಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಇ-ಹರಾಜಿನ ಮೂಲಕ ಈ ಕೆಳಗೆ ಸೂಚಿಸಿದ ದಿನಾಂಕ ಮತ್ತು ಸಮಯದಂದು **"ಎಲ್ಲಿ ಹೇಗಿದೆಯೋ ಹಾಗೆಯೇ ಸ್ಥಿತಿಯಲ್ಲಿ"** ಎಂಬ ಮೂಲಭೂತ ಆಧಾರದ ಮೇಲೆ ಇ-ಹರಾಜು ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

| ಸಾಲಗಾರರ ಹೆಸರು | ವಾಹನ ಮಾದರಿ | ನೋಂದಣಿ ಸಂಖ್ಯೆ | ಪಾರ್ಕಿಂಗ್ ಸ್ಥಳ | ಮೀಸಲು ಬೆಲೆ | EMD ಮೊತ್ತ |
|---|---|---|---|---|---|
| ಶ್ರೀ ಶ್ರವಣ್ ಕುಮಾರ್ ಭೀಮರಾಜ್ ಮಠಾದೀನ್ | ಹುಂಡೈ ಕ್ರೆಟಾ ಎಲೆಕ್ಟ್ರಿಕ್ ಎಕ್ಸಲೆನ್ಸ್ | KA 04 NF 2418 | ಎಸ್‌ಬಿಐ ಪ್ರಾದೇಶಿಕ ಕಚೇರಿ ಬಾಣಸವಾಡಿ ನೆಲಮಾಳಿಗೆ | Rs. 15,20,000/- | Rs. 1,52,000/- |

ಇ-ಹರಾಜಿನ ದಿನಾಂಕ ಮತ್ತು ಸಮಯ 25/05/2026, 11.00 AM ರಿಂದ 04.00 PM ರವರೆಗೆ (EMD ಮೊತ್ತದ ಕೊನೆಯ ದಿನಾಂಕ: 24/05/2026 ರಿಂದ 05.00 PMರವರೆಗೆ)

**ನಿಯಮಗಳು ಮತ್ತು ಷರತ್ತುಗಳು:**

1. ಇ-ಹರಾಜನ್ನು **"ಎಲ್ಲಿ ಹೇಗಿದೆಯೋ ಹಾಗೆಯೇ ಸ್ಥಿತಿಯಲ್ಲಿ"** ನಡೆಸಲಾಗುತ್ತಿದೆ ಮತ್ತು ವಾಹನಗಳ ಮೇಲೆ ಪರಿಣಾಮ ಬೀರುವ ಸ್ಥಿತಿ ಅಥವಾ ಇತರ ಯಾವುದೇ ಸಂಗತಿಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.
2. ಮೇಲಿನ ವಾಹನಗಳನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.
3. ಯಶಸ್ವಿ ಬಿಡ್ದಾರರು ಇ-ಹರಾಜಿನ ಅದೇ ದಿನದಂದು H1 ಬಿಡ್ ಮೊತ್ತ (10% EMD+15% ಮೊತ್ತ) ಬ್ಯಾಂಕ್‌ಗೆ ಪಾವತಿಸಬೇಕು ಮತ್ತು ಉಳಿದ 75% ಅನ್ನು ಇ-ಹರಾಜಿನ ದಿನಾಂಕದಿಂದ 15 ದಿನಗಳಲ್ಲಿ ಪಾವತಿಸಬೇಕು. ತಪ್ಪಿದಲ್ಲಿ ಬ್ಯಾಂಕ್‌ಗೆ ಪಾವತಿಸಿದ ಯಾವುದೇ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಪ್ರತಿ ಬಿಡ್ ಹೆಚ್ಚಳ ಮೊತ್ತ ಕನಿಷ್ಠ **ರೂ. 10,000/-**
5. ಉದ್ದೇಶಿತ ಬಿಡ್ದಾರರು ಶ್ರೀಮತಿ ಪ್ರಾಚಿ ಗುಪ್ತಾ, ಮುಖ್ಯ ವ್ಯವಸ್ಥಾಪಕರು. (Mob: 96325 21591) ಇವರಿಗೆ ಕೆಲಸದ ಸಮಯದಲ್ಲಿ ಕರೆ ಮಾಡಿ ಆಯಾ ಪಾರ್ಕಿಂಗ್‌ಯಾರ್ಡ್‌ಗಳಲ್ಲಿ ವಾಹನಗಳನ್ನು ಪರಿಶೀಲಿಸಬಹುದು.
6. ಯಾವುದೇ ಕಾರಣವನ್ನು ನೀಡದೆ, ಯಶಸ್ವಿ ಬಿಡ್ದಾರರನ್ನು ಘೋಷಿಸುವ ಮೊದಲು ಯಾವುದೇ ಸಮಯದಲ್ಲಿ ಇ-ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸಲು ಅಥವಾ ಮುಂದೂಡಲು ಅಧಿಕೃತ ಅಧಿಕಾರಿಗೆ ಸ್ವಾತಂತ್ರ್ಯ ಹೊಂದಿರುತ್ತಾರೆ.
7. ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಇ-ಹರಾಜು ಪೋರ್ಟಲ್ **https://baanknet.com/** ಮೂಲಕ ನಡೆಯುತ್ತದೆ/

ದಿನಾಂಕ: 14.05.2026
ಸ್ಥಳ: ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿ

**PUBLIC NOTICE**

This is to bring to the notice of the general public that our client is intending to purchase the schedule property from **MS. PRIYA** D/o **MR. PAUL;** person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our clients shall proceed and complete the sale transaction with the above stated person.

**SCHEDULE PROPERTY**

All the Piece and Parcel of the Immovable property bearing **Flat No.203 in 2nd Floor,** BBMP e-PID No.1274521082 measuring **1130 Square feet** Super Built-up area together with **One Car Parking space** and the Residential Apartment as **"Metta Residency"** constructed over the property bearing No.6 (Old No's.3,4,5&6) situated at kacharakana halli village, Kasaba Hobli, Bangalore North Taluk, Kammanahalli main road, Corporation Ward No.89 under BBMP limits.

**R. V. LAW CHAMBERS,**
**Advocate & Legal Consultant**
**No.13, Hennur Cross, Kasaba Hobli,**
**Bangalore-560043, MOBILE: 9108784843**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ**
**ಸಿ.ಮಿಸ್. ನಂ:260/2026**

**ಅರ್ಜಿದಾರರು:** 1. ಶ್ರೀಮತಿ.ಸುಂದ್ರಮ್ಮ, ಕೋಂ. ಲೇಟ್ ಬೈರೇಗೌಡ, ವಯಸ್ಸು 73 ವರ್ಷ, ವಾಸ:- ಯಕ್ಕುಳ್ಳಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

**ವಿರುದ್ಧ**

**ಎದುರುದಾರರು:** 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ವೃತ್ತ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.

**ಪ್ರಕಟಣೆ**

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3ನೇ ಅರ್ಜಿದಾರರ ಅತ್ತೆ, 4 ಮತ್ತು 5 ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ.ಕೆಂಪಮ್ಮ ಕೋಂ ಲೇಟ್ ಬಸವೇಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಯಕ್ಕುಳ್ಳಿ ಗ್ರಾಮದಲ್ಲಿ ದಿನಾಂಕ: 10.05.2005 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 25.07.2026 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2026 ರ ಮೇ 13ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ**

**ಅರ್ಜಿದಾರರ ಪರ ವಕೀಲರು**
**ರವಿಚಂದ್ರ.ಆರ್, ವಕೀಲರು**
**ಸ್ಥಳ: ಕನಕಪುರ**
**ದಿನಾಂಕ:28.04.2026**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ**
**ಸಿ.ಮಿಸ್. ನಂ:261/2026**

**ಅರ್ಜಿದಾರರು:** 1. ಶ್ರೀಮತಿ.ಸುಂದ್ರಮ್ಮ, ಕೋಂ. ಲೇಟ್ ಬೈರೇಗೌಡ, ವಯಸ್ಸು 73 ವರ್ಷ, ವಾಸ:- ಯಕ್ಕುಳ್ಳಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

**ವಿರುದ್ಧ**

**ಎದುರುದಾರರು:** 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ವೃತ್ತ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.

**ಪ್ರಕಟಣೆ**

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ಮೈದುನ, 3ನೇ ಅರ್ಜಿದಾರರ ಗಂಡ, 4 ಮತ್ತು 5 ನೇ ಅರ್ಜಿದಾರರ ತಂದೆಯವರಾದ ಶ್ರೀ.ಬಸವೇಗೌಡ ಬಿನ್ ಲೇಟ್ ಬಸವೇಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಯಕ್ಕುಳ್ಳಿ ಗ್ರಾಮದಲ್ಲಿ ದಿನಾಂಕ: 12.03.1995 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 25.07.2026 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2026 ರ ಮೇ 13ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ**

**ಅರ್ಜಿದಾರರ ಪರ ವಕೀಲರು**
**ರವಿಚಂದ್ರ.ಆರ್, ವಕೀಲರು**
**ಸ್ಥಳ: ಕನಕಪುರ**
**ದಿನಾಂಕ:28.04.2026**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ**
**ಸಿ.ಮಿಸ್. ನಂ:259/ 2026**

**ಅರ್ಜಿದಾರರು:** 1. ಶ್ರೀ.ಬಸವೇಗೌಡ, ಬಿನ್. ಲೇಟ್ ಬೋಚೇಗೌಡ, ವಯಸ್ಸು 82 ವರ್ಷ, ವಾಸ:- ಯಕ್ಕುಳ್ಳಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

**ವಿರುದ್ಧ**

**ಎದುರುದಾರರು:** 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ವೃತ್ತ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.

**ಪ್ರಕಟಣೆ**

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಂದೆಯವರಾದ ಶ್ರೀ.ಬೋಚೇಗೌಡ ಬಿನ್ ಲೇಟ್ ಬೊಕ್ಕೆಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಯಕ್ಕುಳ್ಳಿ ಗ್ರಾಮದಲ್ಲಿ ದಿನಾಂಕ: 05.10.1997 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 25.07.2026 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2026 ರ ಮೇ 13 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ**

**ಅರ್ಜಿದಾರರ ಪರ ವಕೀಲರು**
**ವರವಿಚಂದ್ರ.ಆರ್, ವಕೀಲರು**
**ಸ್ಥಳ: ಕನಕಪುರ**
**ದಿನಾಂಕ:28.04.2026**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ**
**ಸಿ.ಮಿಸ್. ನಂ:258/ 2026**

**ಅರ್ಜಿದಾರರು:** 1. ಶ್ರೀ.ಬಸವೇಗೌಡ, ಬಿನ್. ಲೇಟ್ ಬೋಚೇಗೌಡ, ವಯಸ್ಸು 82 ವರ್ಷ, ವಾಸ:- ಯಕ್ಕುಳ್ಳಿ ಗ್ರಾಮ, ದೊಡ್ಡಕಬ್ಬಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

**ವಿರುದ್ಧ**

**ಎದುರುದಾರರು:** 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ವೃತ್ತ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ.

**ಪ್ರಕಟಣೆ**

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ.ಲಕ್ಕಮ್ಮ ಕೋಂ ಲೇಟ್ ಬೋಚೇಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಯಕ್ಕುಳ್ಳಿ ಗ್ರಾಮದಲ್ಲಿ ದಿನಾಂಕ: 12.08.2001 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 25.07.2026 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2026 ರ ಮೇ 13 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ**

**ಅರ್ಜಿದಾರರ ಪರ ವಕೀಲರು**
**ವರವಿಚಂದ್ರ.ಆರ್, ವಕೀಲರು**
**ಸ್ಥಳ: ಕನಕಪುರ**
**ದಿನಾಂಕ:28.04.2026**

# ಮೊಬೈಲ್ ಬ್ಯಾಂಕಿಂಗ್ ಸೇವೆಗೆ ಚಾಲನೆ




ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಆ್ಯಪ್ ಬಿಡುಗಡೆ ಮಾಡಲಾಯಿತು. ಬ್ಯಾಂಕ್ ಅಧ್ಯಕ್ಷ ಡಿ.ಆರ್. ವಿಜಯಸಾರಥಿ ಇದ್ದರು.

**ಬೆಂಗಳೂರು:** ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಿಂದ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಇನ್ನಷ್ಟು ಸುಲಭ, ಸುಲಲಿತ ಹಾಗೂ ವೇಗವಾಗಿ ಒದಗಿಸುವ ಉದ್ದೇಶದಿಂದ ಎಸ್‌ಎಸ್‌ಸಿಬಿಎಲ್ ಎಂಪಾಸ್‌ಬುಕ್ ಆ್ಯಪ್‌ಗೆ ಬ್ಯಾಂಕ್ ಅಧ್ಯಕ್ಷ ಡಿ.ಆರ್. ವಿಜಯಸಾರಥಿ ಚಾಲನೆ ನೀಡಿದರು.

ಅಧ್ಯಕ್ಷ ಡಿ.ಆರ್. ವಿಜಯಸಾರಥಿ ಅವರು ಮಾತನಾಡಿ, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಗ್ರಾಹಕರಿಗೆ ಸುರಕ್ಷಿತ ಹಾಗೂ ಸುಲಭ ಸೇವೆ ಒದಗಿಸುವುದು ಬ್ಯಾಂಕಿನ ಪ್ರಮುಖ ಆದ್ಯತೆಯಾಗಿದೆ. ಗ್ರಾಹಕರಿಗೆ ಸೂಕ್ತ ಮಾರ್ಗದರ್ಶಕ ಹಾಗೂ ಪ್ರೇರಣಾದಾಯಕ ರೀತಿಯಲ್ಲಿ ಬ್ಯಾಂಕ್ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಿಜಿಟಲ್ ಸೇವೆಗಳ ಮೂಲಕ ಗ್ರಾಹಕರ ವಿಶ್ವಾಸವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು. ಹೊಸದಾಗಿ ಪರಿಚಯಿಸಲಾದ ಆ್ಯಪ್ ಮೂಲಕ ಗ್ರಾಹಕರು ತಮ್ಮ ಖಾತೆಯ ಬ್ಯಾಲೆನ್ಸ್ ಪರಿಶೀಲನೆ, ಮಿನಿ ಸ್ಟೇಟ್ಮೆಂಟ್ ವೀಕ್ಷಣೆ, ಪೂರ್ಣ ಸ್ಟೇಟ್ಮೆಂಟ್ ಡೌನ್ಲೋಡ್ ಸೇರಿದಂತೆ ವಿವಿಧ ಸೇವೆಗಳನ್ನು ದಿನದ 24 ಗಂಟೆಗಳ ಕಾಲ ಸುಲಭವಾಗಿ ಪಡೆಯಬಹುದು. ಕಾರ್ಯಕ್ರಮದಲ್ಲಿ ಬ್ಯಾಂಕ್ ಉಪಾಧ್ಯಕ್ಷರಾದ ಡಾ. ಎಂ. ರಂಗಧಾಮಶೆಟ್ಟಿ , ನಿರ್ದೇಶಕರಾದ ವೆಂಕಟಾಚಲಪತಿ ಬಿ. ಎಲ್., ಪಿ. ರುದ್ರಮೂರ್ತಿ, ಎಸ್. ಸತ್ಯಮೂರ್ತಿ, ಎಂ.ಸಿ. ಫಾಲನೇತ್ರ, ಲೋಹಿತ್ ಜಿ., ನಂಜೇಗೌಡ, ಪಿ.ಕೆ. ರವೀಂದ್ರ, ಎನ್. ಮಹಾಲಕ್ಷ್ಮಿ, ಎಚ್. ಮಾರುತಿ, ಅನ್ನಪೂರ್ಣಮ್ಮ, ಜಯಲಕ್ಷ್ಮಿ ಜಿ. ತೋಟಗೇರ, ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಕೆ.ಎನ್. ಕೃಷ್ಣಯ್ಯ ಶೆಟ್ಟಿ ಹಾಗೂ ಪೂರ್ಣಾವಧಿ ಸಲಹೆಗಾರರಾದ ಬಿ.ಆರ್. ನಾಗರಾಜ್ ಉಪಸ್ಥಿತರಿದ್ದರು.

NUCLEUS SOFTWARE

**ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್**
**CIN: L74899DL1989PLCO34594**
**ನೋಂದಾಯಿತ ಕಚೇರಿ:** 33-35, ತ್ಯಾಗರಾಜ್ ನಗರ ಮಾರ್ಕೆಟ್, ನವದೆಹಲಿ -110003.
**ದೂರವಾಣಿ ಸಂಖ್ಯೆ:** +91-120-4031400, **ಫ್ಯಾಕ್ಸ್:** +91-120-4031672
**ಇಮೇಲ್:** investorrelations@nucleussoftware.com
**ವೆಬ್‌ಸೈಟ್:** www.nucleussoftware.com

**ಸಾರ್ವಜನಿಕ ಸೂಚನೆ**

**ಪ್ರಿಪೇಯ್ಡ್ ಪೇಮೆಂಟ್ ಇನ್‌ಸ್ಟ್ರುಮೆಂಟ್ ಕಾರ್ಯಾಚರಣೆಯ ಸ್ವಯಂಪ್ರೇರಿತ ಅಧಿಕಾರ ಒಪ್ಪಿಸುವಿಕೆ ಮತ್ತು ಮುಚ್ಚುವಿಕೆಯ ಬಗ್ಗೆ ಸೂಚನೆ**

ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ತನ್ನ ಎಲ್ಲಾ ಗ್ರಾಹಕರು ಮತ್ತು ಮಧ್ಯಸ್ಥಗಾರರಿಗೆ ತಿಳಿಸುವುದೇನೆಂದರೆ, ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನೀಡಲಾದ **ಪ್ರಿಪೇಯ್ಡ್ ಪೇಮೆಂಟ್ ಇನ್‌ಸ್ಟ್ರುಮೆಂಟ್ (PPI) ಅನುಮತಿಯನ್ನು** ಸ್ವಯಂಪ್ರೇರಿತವಾಗಿ ಹಿಂದಿರುಗಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಅದರಂತೆ, ಕಂಪನಿಯು ತನ್ನ ಪಾವತಿ ವ್ಯವಸ್ಥೆಯ ಕಾರ್ಯಾಚರಣೆಯನ್ನು ನಿಲ್ಲಿಸಲು ಉದ್ದೇಶಿಸಿದೆ. ಗ್ರಾಹಕರು ತಮ್ಮ ಬಾಕಿ ಇರುವ ಮೊತ್ತದ ಮರುಪಾವತಿ/ರಿಡೆಮ್ಶನ್ ಸಂಬಂಧಿಸಿದ ಕೆಳಕಂಡ ಮಹತ್ವದ ಮಾಹಿತಿಯನ್ನು ದಯವಿಟ್ಟು ಗಮನಿಸಬೇಕಾಗಿ ವಿನಂತಿಸಲಾಗಿದೆ.

1. **ಬಾಕಿ ಮೊತ್ತದ ಮರುಪಾವತಿಯ ಆಯ್ಕೆಗಳು**
   ಗ್ರಾಹಕರು ತಮ್ಮ ಬಾಕಿ ಇರುವ ಮೊತ್ತದ ಮರುಪಾವತಿಯನ್ನು ಕೆಳಕಂಡಂತೆ ಪಡೆಯಬಹುದು:
   - **ಆಫ್‌ಲೈನ್ ಬ್ಯಾಲೆನ್ಸ್ (PaySe™ ಕಾರ್ಡ್):**
     ಕಂಪನಿಯಿಂದ ನೀಡಲಾದ PaySe™ ಕಾರ್ಡನ್ನು ಹಿಂದಿರುಗಿಸಿದ ನಂತರ, ಗ್ರಾಹಕರು ಲಭ್ಯವಿರುವ ಆಫ್‌ಲೈನ್ ಬ್ಯಾಲೆನ್ಸ್‌ನ ಮರುಪಾವತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.
   - **ಆನ್‌ಲೈನ್ ಬ್ಯಾಲೆನ್ಸ್:**
     ಗ್ರಾಹಕರ ಪಿಪಿಐ ಖಾತೆಯಲ್ಲಿ ಲಭ್ಯವಿರುವ ಆನ್‌ಲೈನ್ ಬ್ಯಾಲೆನ್ಸ್ ಅನ್ನು ಅಗತ್ಯವಾದ ಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಕಂಪನಿಯಲ್ಲಿ ನೋಂದಾಯಿಸಲಾದ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.
2. **ವಿಮೋಚನಾ ವಿನಂತಿಗಳನ್ನು ಸಲ್ಲಿಸುವ ವಿಧಾನ**
   ಗ್ರಾಹಕರು ತಮ್ಮ ವಿಮೋಚನಾ ವಿನಂತಿಗಳನ್ನು ಕೆಳಕಂಡ ಯಾವುದೇ ವಿಧಾನದ ಮೂಲಕ ಸಲ್ಲಿಸಬಹುದು:
   **ಇಮೇಲ್:** PaySEsupport@nucleussoftware.com
   - **ಗ್ರಾಹಕ ಸೇವಾ ಸಂಖ್ಯೆ:** 9582191818
   - **ಲಿಖಿತ ಸಂವಹನ:**
     ಪೇಸೇ ಸಪೋರ್ಟ್, ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ಎ-39, ಸೆಕ್ಟರ್-62, ನೋಯ್ಡಾ, ಉತ್ತರ ಪ್ರದೇಶ - 201307.
3. **ನೋಡಲ್ ಅಧಿಕಾರಿಯ ವಿವರಗಳು (ಪ್ರಶ್ನೆಗಳು / ದೂರುಗಳಿಗಾಗಿ)**
   ರಿಡೆಮ್ಶನ್/ಮರುಪಾವತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ದೂರುಗಳಿಗಾಗಿ ಗ್ರಾಹಕರು ಕೆಳಕಂಡವರನ್ನು ಸಂಪರ್ಕಿಸಬಹುದು: **ಶ್ರೀ. ಅಜಯ್ ಶರ್ಮಾ** ನೋಡಲ್ ಅಧಿಕಾರಿ, ದೂರವಾಣಿ: 8975906521, ಇಮೇಲ್: ajay.sharma@nucleussoftware.com, ಕಚೇರಿ ವಿಳಾಸ: ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ಎ-39, ಸೆಕ್ಟರ್-62, ನೋಯ್ಡಾ, ಉತ್ತರ ಪ್ರದೇಶ - 201307.
4. **ರಿಡೆಮ್ಶನ್ ವಿನಂತಿಗಳ ಪ್ರಕ್ರಿಯೆಯ ಸಮಯಮಿತಿ**
   ಕಂಪನಿಯು ಗ್ರಾಹಕರಿಂದ ಸಂಪೂರ್ಣ ವಿಮೋಚನಾ ವಿನಂತಿಯನ್ನು ಸ್ವೀಕರಿಸಿದ ದಿನಾಂಕದಿಂದ **30 ಕೆಲಸದ ದಿನಗಳ** ಒಳಗಾಗಿ, ಪರಿಶೀಲನೆ ಮತ್ತು ನಿಯಂತ್ರಕ ಅನುಪಾಲನೆಯ ಅವಶ್ಯಕತೆಗಳಿಗೆ ಒಳಪಟ್ಟು, ಮರುಪಾವತಿಯನ್ನು ಪ್ರಕ್ರಿಯೆಗೊಳಿಸಿ ಜಮೆ ಮಾಡುವುದು.
   ಯಾವುದೇ ತೊಂದರೆಯನ್ನು ತಪ್ಪಿಸಲು ಗ್ರಾಹಕರು **31ನೇ ಮೇ 2026** ರೊಳಗಾಗಿ ರಿಡೆಮ್ಶನ್ ಪ್ರಕ್ರಿಯೆಯನ್ನು ಆರಂಭಿಸಲು ಸೂಚಿಸಲಾಗಿದೆ.
   ಯಾವುದೇ ಹೆಚ್ಚಿನ ಸಹಾಯಕ್ಕಾಗಿ, ದಯವಿಟ್ಟು ಮೇಲೆ ನೀಡಲಾದ ನಮ್ಮ ಗ್ರಾಹಕ ಸೇವಾ ಮಾಧ್ಯಮಗಳ ಮೂಲಕ ಸಂಪರ್ಕಿಸಬೇಕಾಗಿ ವಿನಂತಿಸಲಾಗಿದೆ.

**ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್**
**ಪರವಾಗಿ ಮತ್ತು ಅದರ ಪ್ರತಿನಿಧಿಯಾಗಿ,**
**ಸಹಿ/-**
**ಪರಾಗ್ ಭಿಸೆ**
**ಸಿಇಒ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು**

**ಸ್ಥಳ : ನೊಯ್ಡಾ**
**ದಿನಾಂಕ : 16.05.2026**

# ನೀಟ್ ಪರೀಕ್ಷೆಗೆ ತರಬೇತಿ

**ಬೆಂಗಳೂರು:** ನೀಟ್ ಮರುಪರೀಕ್ಷೆಯಿಂದ ದೇಶಾದ್ಯಂತ ಸಾವಿರಾರು ನೀಟ್ ಆಕಾಂಕ್ಷಿಗಳು ಅನಿಶ್ಚಿತತೆ, ಭಾವನಾತ್ಮಕ ಒತ್ತಡದೊಂದಿಗೆ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಸಮಯದಲ್ಲಿ, ದೀಕ್ಷಾ ವೇದಾಂತು ರೀ-ನೀಟ್ ಕಾರ್ಯಕ್ರಮ ಘೋಷಿಸಿದೆ. ಈ ಮೂಲಕ ಎಲ್ಲಾ ನೀಟ್ ಆಕಾಂಕ್ಷಿಗಳಿಗೆ (ದೀಕ್ಷಾ ವೇದಾಂತು ಹೊರತಾದ ವಿದ್ಯಾರ್ಥಿಗಳಿಗೂ ಲಭ್ಯ) ಉಚಿತವಾಗಿ ಬೆಂಬಲ ನೀಡಲು ಮುಂದಾಗಿದೆ. ಆಕಾಂಕ್ಷಿಗಳು ಆನ್‌ಲೈನ್ ತರಬೇತಿ, ನಿರ್ದಿಷ್ಟ ದೀಕ್ಷಾ ವೇದಾಂತು ಕ್ಯಾಂಪಸ್‌ಗಳಿಗೆ ಹೋಗಿ ಆಫ್‌ಲೈನ್ ತರಗತಿಯಲ್ಲಿ ಭಾಗಿಯಾಗಬಹುದು. ಇದರ ಉದ್ದೇಶ ಶೈಕ್ಷಣಿಕ ಸಿದ್ಧತೆ ಮಾತ್ರವಲ್ಲ, ವಿದ್ಯಾರ್ಥಿಗಳು ಆತ್ಮವಿಶ್ವಾಸವನ್ನು ಪುನರ್ನಿರ್ಮಿಸಲು, ಸ್ಥಿರತೆಯನ್ನು ಕಾಪಾಡಿಕೊಳ್ಳಲು ಮತ್ತು ಮರುಪರೀಕ್ಷೆಯನ್ನು ಶಾಂತ ಮತ್ತು ಹೆಚ್ಚು ಸಿದ್ಧ ಮನಸ್ಥಿತಿಯೊಂದಿಗೆ ಎದುರಿಸಲು ಸಹಾಯ ಮಾಡುವುದು ಎಂದು ದೀಕ್ಷಾ ವೇದಾಂತುವಿನ ಸಂಸ್ಥಾಪಕ ಡಾ. ಶ್ರೀಧರ್ ಹೇಳಿದ್ದಾರೆ.